DCBC – 303

III Semester B.Com. Examination, December 2024/January 2025
(NEP Scheme) (Freshers and Repeaters)
COMMERCE
Cost Accounting

Time : 2½ Hours Max. Marks : 60

Instruction : *Answers should be written either **completely** in **Kannada** or **English**.*

SECTION – A

Answer **any 5** of the following sub-questions. **Each** sub-question carries **2** marks. **(5×2=10)**

1. a) What is cost centre ?
   b) What do you mean by direct cost ?
   c) Give the meaning of overtime.
   d) Name any four causes of labour turnover.
   e) What is fixed overhead ?
   f) Mention any four financial incomes.
   g) What is absorption of overhead ?

SECTION – B

Answer **any 3** of the following questions. **Each** question carries **4** marks. **(3×4=12)**

2. State any four causes for the difference in profits as per cost accounts and financial accounts.

3. From the following information, calculate Economic Order Quantity (EOQ) and calculate number of orders to be placed in a year.
   a) Annual consumption of materials 4000 units
   b) Cost of placing one order Rs. 100
   c) Cost per unit Rs. 80
   d) Storage and carrying cost 8% of inventory.

P.T.O.

4. A Light Engineering has 3 production departments A, B and C and 2 service departments D and E. The following are the expenses for a particular period :

	Rs.
Rent	5,000
General Lighting	600
Power	1,500
Depreciation of Machinery	10,000

The following further details are available.

Particulars	A	B	C	D	E
Area (square feet)	2,000	2,500	3,000	2,000	500
Light points	15	20	10	5	–
HP of Machines	60	30	50	10	–
Value of Machinery (Rs.)	60,000	80,000	1,00,000	5,000	5,000

Apportion the costs to various departments in most equitable way.

5. From the following information, prepare Stores Ledger Account under Simple Average Price Method.

February 2024	
1	Received 500 units @ Rs. 20 per unit
10	Received 300 units @ Rs. 24 per unit
15	Issued 700 units
20	Received 400 units @ Rs. 28 per unit
25	Issued 300 units
26	Received 500 units @ Rs. 22 per unit
27	Issued 200 units

6. Standard time allowed for a job is 15 hours @ Rs. 50 per hour, actual time saved by worker is 3 hours. Calculate his earnings under Halsey System and Rowan System.

SECTION – C

Answer **any 3** of the following questions. **Each** question carries **10** marks. **(3×10=30)**

7. The following particulars have been extracted from Eagle Manufacturing Company for the year 2022.

	Rs.
Cost of materials	6,00,000
Wages	5,00,000
Factory overheads	3,00,000
Administration overheads	3,36,000
Selling charges	2,24,000
Distribution charges	1,40,000
Profit	4,20,000

A work order has to be executed in 2023, and estimated expenses are materials Rs. 8,000, wages Rs. 5,000.

Assuming that in 2023, the factory overheads will go up by 20%, distribution charges will come down by 10% and selling and administration charges will go up each by 15%. At what price the product to be sold, so as to earn same rate of profit on selling price as in 2022 ?

Factory overheads are based on wages and administration, selling and distribution overheads on factory cost.

8. The following particulars relate to a manufacturing company which has 3 production departments A, B and C and 2 service departments X and Y :

Particulars	**A**	**B**	**C**	**X**	**Y**
Total overheads as per primary distribution	6,300	7,400	2,800	4,500	2,000

The company decided to charge the service department cost on the basis of the following.

Departments	A	B	C	X	Y
Service department X	40%	30%	20%	–	10%
Service department Y	30%	30%	20%	20%	–

Find the total overheads of production departments by using simultaneous equation method or repeated distribution method.

9. The following details are related to Machine X :

Cost of the Machine	Rs. 10,00,000
Estimated life	10 Years
Transportation and Installation Cost	Rs. 3,00,000
Scrap value	Rs. 1,00,000
Yearly working hours	3000 Hours

Motive power 20 units per hour @ Rs. 20 per unit

Oil and other consumables Rs. 4,000 p.m.

Rent Rs. 8,000 p.m. of which $\frac{1}{4}^{th}$ is allotted to this machine.

Supervisor salary Rs. 10,000 p.m. ($\frac{1}{5}^{th}$ of his time is devoted to this machine)

Repairs and maintenance cost of the machine is Rs. 45,000 p.a.

Calculate Machine Hour Rate.

10. Calculate the earnings of workers X, Y and Z under straight piece rate system and Merrick's multiple piece rate system from the following particulars :

Normal rate per hour Rs. 300/-

Standard time per unit 1 Minute

Output per day is as follows :

Worker X = 490 units

Worker Y = 390 units

Worker Z = 590 units

Working hours per day are 8 hrs.

11. From the following, prepare a reconciliation statement, calculate profit as per financial accounts :

	Rs.
a) Net profit as per costing records	86,200
b) Works overhead underrecovered in costing	1,560
c) Goodwill written off in financial accounts	850
d) Income tax provided in financial books	20,000
e) Depreciation charges in financial records	5,000
f) Interest received but not included in costing	4,000
g) Loss due to theft and pilferage provided only in financial books	1,000
h) Depreciation recovered in costing	6,500
i) Office overheads recovered in excess	900

SECTION – D

12. Answer the following. **(1×8=8)**

A) Identify cost unit for the following industry.

a) Iron

b) Power

c) Bricks

d) Paper

e) Timber

f) Cement

g) Transport

h) Petrol

OR

B) Mention steps in procurement process of inventory.

ಕನ್ನಡ ಆವೃತ್ತಿ

ವಿಭಾಗ – ಎ

ಕೆಳಗಿನ ಯಾವುದಾದರೂ **5** ಉಪ-ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಉಪ-ಪ್ರಶ್ನೆಗೆ **2** ಅಂಕಗಳು. **(5×2=10)**

1. a) ವೆಚ್ಚ ಕೇಂದ್ರ ಎಂದರೇನು ?

   b) ನೇರ ವೆಚ್ಚ ಎಂದರೇನು ?

   c) ಹೆಚ್ಚುವರಿ ಸಮಯದ ಅರ್ಥವನ್ನು ನೀಡಿ.

   d) ಕಾರ್ಮಿಕ ಆವರ್ತನೆಯ ಯಾವುದಾದರೂ ನಾಲ್ಕು ಕಾರಣಗಳನ್ನು ಹೆಸರಿಸಿ.

   e) ಸ್ಥಿರ ಮೇಲುವೆಚ್ಚ ಎಂದರೇನು ?

   f) ಯಾವುದಾದರೂ ನಾಲ್ಕು ಹಣಕಾಸಿನ ಆದಾಯಗಳನ್ನು ತಿಳಿಸಿ.

   g) ಮೇಲುವೆಚ್ಚಗಳ ಹೀರಿಕೊಳ್ಳುವಿಕೆ ಎಂದರೇನು ?

ವಿಭಾಗ – ಬಿ

ಕೆಳಗಿನ ಯಾವುದಾದರೂ **3** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **4** ಅಂಕಗಳು. **(3×4=12)**

2. ವೆಚ್ಚ ನಿರ್ಣಯ ಲೆಕ್ಕ ಮತ್ತು ಹಣಕಾಸಿನ ಲೆಕ್ಕದ ನಿವ್ವಳ ಲಾಭದಲ್ಲಿ ವ್ಯತ್ಯಾಸಗಳು ತೋರಿಸುವುದಕ್ಕೆ ಯಾವುದಾದರೂ ನಾಲ್ಕು ಕಾರಣಗಳನ್ನು ನೀಡಿ.

3. ಈ ಕೆಳಕಂಡ ಮಾಹಿತಿಯಿಂದ ಮಿತವ್ಯಯ ಆದೇಶ ಗಾತ್ರ ಹಾಗೂ ಒಂದು ವರ್ಷದಲ್ಲಿ ಮಾಡಬಹುದಾದ ಆದೇಶ ಸಂಖ್ಯೆಗಳನ್ನು ಕಂಡುಹಿಡಿಯಿರಿ.

   a) ವಾರ್ಷಿಕ ಸಾಮಗ್ರಿ ಬಳಕೆ ಪ್ರಮಾಣ 4000 ಯೂನಿಟ್‌ಗಳು

   b) ಒಂದು ಆದೇಶವನ್ನು ಮಾಡಲು ತಗಲುವ ವೆಚ್ಚ ರೂ. 100

   c) ಒಂದು ಯೂನಿಟ್ ವೆಚ್ಚ ರೂ. 80

   d) ಸಂಗ್ರಹಣಾ ಮತ್ತು ಹೊರುವ ವೆಚ್ಚ – ದಾಸ್ತಾನಿನ ಶೇ. 8 ರಷ್ಟು.

4. ಲೈಟ್ ಇಂಜಿನಿಯರಿಂಗ್‌ನಲ್ಲಿ ಮೂರು ಉತ್ಪಾದನಾ ಇಲಾಖೆಗಳಾದ A, B ಮತ್ತು C ಮತ್ತು ಎರಡು ಸೇವಾ ಇಲಾಖೆಗಳಾದ D ಮತ್ತು E ಇವೆ. ನಿರ್ದಿಷ್ಟ ಅವಧಿಗೆ ಈ ಕೆಳಕಂಡ ವೆಚ್ಚಗಳನ್ನು ನೀಡಲಾಗಿದೆ.

	ರೂ.
ಬಾಡಿಗೆ	5,000
ಸಾಮಾನ್ಯ ವಿದ್ಯುತ್ ದೀಪಗಳಿಗೆ	600
ವಿದ್ಯುಚ್ಛಕ್ತಿ	1,500
ಯಂತ್ರೋಪಕರಣಗಳ ಸವಕಳಿ	10,000

ಈ ಕೆಳಕಂಡ ಮತ್ತಷ್ಟು ದತ್ತಾಂಶವೂ ಲಭ್ಯವಿದೆ.

ವಿವರಗಳು	A	B	C	D	E
ಪ್ರದೇಶ (ಚದರ ಅಡಿಗಳಲ್ಲಿ)	2,000	2,500	3,000	2,000	500
ದೀಪಗಳ ಸಂಖ್ಯೆ	15	20	10	5	–
ಯಂತ್ರಗಳ HP	60	30	50	10	–
ಯಂತ್ರಗಳ ಮೌಲ್ಯ (ರೂ.)	60,000	80,000	1,00,000	5,000	5,000

ವಿವಿಧ ವಿಭಾಗಗಳ ವೆಚ್ಚಗಳನ್ನು ಸೂಕ್ತವಾದ ಆಧಾರದಲ್ಲಿ ಹಂಚಿಕೆ ಮಾಡಿ.

5. ಈ ಕೆಳಕಂಡ ಮಾಹಿತಿಯಿಂದ ಸರಳ ಸರಾಸರಿ ದರ ವಿಧಾನದಲ್ಲಿ ಸರಕು ದಾಸ್ತಾನು ಖಾತೆಯನ್ನು ತಯಾರಿಸಿ.

ಫೆಬ್ರವರಿ 2024	
1	ಪ್ರತಿ ಯೂನಿಟ್‌ಗೆ ರೂ. 20 ರಂತೆ 500 ಯೂನಿಟ್‌ಗಳನ್ನು ಸ್ವೀಕರಿಸಿದ್ದು
10	ಪ್ರತಿ ಯೂನಿಟ್‌ಗೆ ರೂ. 24 ರಂತೆ 300 ಯೂನಿಟ್‌ಗಳನ್ನು ಸ್ವೀಕರಿಸಿದ್ದು
15	700 ಯೂನಿಟ್‌ಗಳ ವಿತರಣೆ
20	ಪ್ರತಿ ಯೂನಿಟ್‌ಗೆ ರೂ. 28 ರಂತೆ 400 ಯೂನಿಟ್‌ಗಳನ್ನು ಸ್ವೀಕರಿಸಿದ್ದು
25	300 ಯೂನಿಟ್‌ಗಳ ವಿತರಣೆ
26	ಪ್ರತಿ ಯೂನಿಟ್‌ಗೆ ರೂ. 22 ರಂತೆ 500 ಯೂನಿಟ್‌ಗಳನ್ನು ಸ್ವೀಕರಿಸಿದ್ದು
27	200 ಯೂನಿಟ್‌ಗಳ ವಿತರಣೆ

6. ಒಂದು ಉದ್ಯೋಗಕ್ಕೆ ಪ್ರತಿ ಗಂಟೆಗೆ ರೂ. 50 ರಂತೆ 15 ಗಂಟೆಗಳ ಶಿಷ್ಟ ಸಮಯವನ್ನು ನಿಗದಿಪಡಿಸಲಾಯಿತು. ಒಬ್ಬ ಕೆಲಸಗಾರ, 3 ಗಂಟೆಗಳ ಸಮಯವನ್ನು ನಿಜವಾಗಿ ಉಳಿಸಿದ್ದು, ಹಾಲ್ಸೆ ಮತ್ತು ರೋವನ್ ಯೋಜನೆಯ ಪ್ರಕಾರ ಅವನ ಕೂಲಿಯನ್ನು ಲೆಕ್ಕ ಹಾಕಿ.

ವಿಭಾಗ – ಸಿ

(3×10=30)

ಕೆಳಗಿನ ಯಾವುದಾದರೂ 3 ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 10 ಅಂಕಗಳು.

7. ಈಗಲ್ ಉತ್ಪಾದನಾ ಕಂಪನಿಯ 2022 ರ ವರ್ಷಕ್ಕೆ ಈ ಕೆಳಕಂಡ ವಿವರಗಳನ್ನು ಪಡೆಯಲಾಗಿದೆ.

	ರೂ.
ಸರಕುಗಳ ವೆಚ್ಚ	6,00,000
ಕೂಲಿ	5,00,000
ಕಾರ್ಖಾನೆ ಮೇಲುವೆಚ್ಚಗಳು	3,00,000
ಆಡಳಿತ ಮೇಲುವೆಚ್ಚಗಳು	3,36,000
ಮಾರಾಟದ ಖರ್ಚುಗಳು	2,24,000
ಹಂಚಿಕೆಯ ಖರ್ಚುಗಳು	1,40,000
ಲಾಭ	4,20,000

2023 ರಲ್ಲಿ ಕಾರ್ಯ ಆದೇಶವನ್ನು ಕಾರ್ಯಗತಗೊಳಿಸಲು ಅಂದಾಜು ವೆಚ್ಚಗಳಾದ ಸರಕುಗಳು ರೂ. 8,000, ಕೂಲಿ ರೂ. 5,000 ಗಳನ್ನು ಪಾವತಿಸಬೇಕಿದೆ.

2023 ಕ್ಕೆ ಈ ಕೆಳಕಂಡಂತೆ ಊಹಿಸಲಾಗಿ, ಕಾರ್ಖಾನೆ ಮೇಲುವೆಚ್ಚಗಳಲ್ಲಿ 20% ಏರಿಕೆ, ಹಂಚಿಕೆಯ ಖರ್ಚುಗಳಲ್ಲಿ 10% ಇಳಿಕೆ ಮತ್ತು ಮಾರಾಟ ಮತ್ತು ಆಡಳಿತ ವೆಚ್ಚಗಳಲ್ಲಿ ತಲಾ 15% ಏರಿಕೆಯಾಗಿದೆ. 2022 ರಲ್ಲಿ ಗಳಿಸಿದ ಶೇಕಡ ಲಾಭ ಈ ವರ್ಷದಲ್ಲಿಯೂ ಗಳಿಸುವುದು ಎಂದು ಅಂದಾಜಿಸಿ ಬೆಲೆಯನ್ನು ನಿಗದಿಪಡಿಸಿ.

ಕಾರ್ಖಾನೆ ಮೇಲುವೆಚ್ಚಗಳು ಕೂಲಿಯನ್ನು ಆಧರಿಸಿವೆ ಮತ್ತು ಆಡಳಿತ, ಮಾರಾಟ ಮತ್ತು ಹಂಚಿಕೆಯ ಮೇಲುವೆಚ್ಚಗಳು ಕಾರ್ಖಾನೆ ವೆಚ್ಚದ ಆಧರಿತವಾಗಿವೆ.

8. ಈ ಕೆಳಕಂಡ ವಿವರಗಳನ್ನು ಉತ್ಪಾದನಾ ಕಂಪನಿಯಲ್ಲಿರುವ 3 ಉತ್ಪಾದನಾ ಇಲಾಖೆಗಳಾದ A, B ಮತ್ತು C ಮತ್ತು 2 ಸೇವಾ ಇಲಾಖೆಗಳಾದ X ಮತ್ತು Y ಸಂಗ್ರಹಿಸಲಾಗಿದೆ.

ವಿವರಗಳು	A	B	C	X	Y
ಪ್ರಾಥಮಿಕ ಹಂಚಿಕೆಯ ಪ್ರಕಾರ ಪ್ರತಿ ವಿಭಾಗದ ಒಟ್ಟು ಮೇಲುವೆಚ್ಚ	6,300	7,400	2,800	4,500	2,000

ಕಂಪನಿಯು ಸೇವಾ ವಿಭಾಗಗಳ ವೆಚ್ಚಗಳನ್ನು ಈ ಕೆಳಕಂಡ ಶೇಕಡಾವಾರಿನಲ್ಲಿ ಹಂಚಿಕೆ ಮಾಡಲು ನಿರ್ಧರಿಸಿದೆ.

ವಿವರಗಳು	A	B	C	X	Y
ಸೇವಾ ವಿಭಾಗ X	40%	30%	20%	–	10%
ಸೇವಾ ವಿಭಾಗ Y	30%	30%	20%	20%	–

ಪುನರಾವರ್ತಿತ ಹಂಚಿಕೆ ವಿಧಾನ ಅಥವಾ ಏಕಕಾಲೀನ ಸಮೀಕರಣ ಪದ್ಧತಿಯನ್ನು ಉಪಯೋಗಿಸಿ ಉತ್ಪಾದನಾ ವಿಭಾಗಗಳ ಒಟ್ಟು ಮೇಲುವೆಚ್ಚಗಳನ್ನು ಕಂಡುಹಿಡಿಯಿರಿ.

9. ಕೆಳಗಿನ ಮಾಹಿತಿಯು X ಯಂತ್ರಕ್ಕೆ ಸಂಬಂಧಿಸಿದೆ.

ಯಂತ್ರದ ವೆಚ್ಚ	ರೂ. 10,00,000
ಅಂದಾಜು ಕಾರ್ಯಾವಧಿ	10 ವರ್ಷಗಳು
ಸಾಗಾಣಿಕೆ ಮತ್ತು ಸ್ಥಾಪನಾ ವೆಚ್ಚಗಳು	ರೂ. 3,00,000
ಚೂರು ಪಾರು ಮೌಲ್ಯ	ರೂ. 1,00,000
ವಾರ್ಷಿಕ ಕೆಲಸದ ಗಂಟೆಗಳು	3000 ಗಂಟೆಗಳು

ವಿದ್ಯುತ್ ಬಳಕೆ ಒಂದು ಘಂಟೆಗೆ 20 ಯೂನಿಟ್‌ಗಳು, ಪ್ರತಿ ಯೂನಿಟ್‌ಗೆ ರೂ. 20

ಆಯಿಲ್ ಮತ್ತು ಇತರೆ ಬಳಕೆಯಾದವು ಪ್ರತಿ ತಿಂಗಳಿಗೆ ರೂ. 4,000

ಬಾಡಿಗೆ ರೂ. 8,000 (ಪ್ರತಿ ತಿಂಗಳಿಗೆ) ಅದರಲ್ಲಿ $\frac{1}{4}$ ಈ ಯಂತ್ರಕ್ಕೆ ಸಂಬಂಧಿಸಿದೆ.

ಮೇಲ್ವಿಚಾರಕರ ಸಂಬಳ ರೂ. 10,000 ಪ್ರತಿ ತಿಂಗಳಿಗೆ (ಅವನ $\frac{1}{5}$ ಸಮಯ ಈ ಯಂತ್ರಕ್ಕೆ ಮೀಸಲಾಗಿದೆ)

ಯಂತ್ರದ ರಿಪೇರಿ ಮತ್ತು ನಿರ್ವಹಣಾ ವೆಚ್ಚ ವಾರ್ಷಿಕ ರೂ. 45,000.

ಯಂತ್ರ, ಗಂಟೆ ದರವನ್ನು ಕಂಡುಹಿಡಿಯಿರಿ.

10. ಕೆಳಕಂಡ ವಿವರಗಳಿಂದ X, Y ಮತ್ತು Z ಕೆಲಸಗಾರರ ಗಳಿಕೆಯನ್ನು ನೇರ ತುಂಡು ದರ ಮತ್ತು ಮೆರಿಕ್‌ನ ಬಹು ತುಂಡು ದರ ವಿಧಾನಗಳ ಅಡಿಯಲ್ಲಿ ಕಂಡುಹಿಡಿಯಿರಿ.

ಪ್ರತಿ ಗಂಟೆಗೆ ಸಾಮಾನ್ಯ ದರ ರೂ. 300/-

ಒಂದು ಯೂನಿಟ್‌ಗೆ ಪ್ರಮಾಣಿತ ಸಮಯ 1 ನಿಮಿಷ

ಒಂದು ದಿನದ ಉತ್ಪಾದನೆ ಈ ಕೆಳಕಂಡಂತಿದೆ :

ಕೆಲಸಗಾರ X = 490 ಯೂನಿಟ್‌ಗಳು

ಕೆಲಸಗಾರ Y = 390 ಯೂನಿಟ್‌ಗಳು

ಕೆಲಸಗಾರ Z = 590 ಯೂನಿಟ್‌ಗಳು

ಪ್ರತಿ ದಿನದ ಕೆಲಸದ ಗಂಟೆಗಳು 8.

11. ಕೆಳಕಂಡ ವಿವರಗಳಿಂದ ಹೊಂದಾಣಿಕೆ ಪಟ್ಟಿಯನ್ನು ತಯಾರಿಸಿ ಮತ್ತು ಹಣಕಾಸಿನ ಲಾಭವನ್ನು ನಿರ್ಧರಿಸಿ.

	ರೂ.
a) ವೆಚ್ಚ ನಿರ್ಣಯ ಪುಸ್ತಕಗಳ ಪ್ರಕಾರ ನಿವ್ವಳ ಲಾಭ	86,200
b) ಕಾರ್ಯಗಳ ಮೇಲ್ವೆಚ್ಚಗಳು ವೆಚ್ಚ ಲೆಕ್ಕ ಪತ್ರದಲ್ಲಿ ಕಡಿಮೆ ವಸೂಲಾಗಿದೆ	1,560
c) ಹಣಕಾಸು ಲೆಕ್ಕ ಪತ್ರದಲ್ಲಿ ತೆಗೆದುಹಾಕಲ್ಪಟ್ಟ ಕೀರ್ತಿಮೌಲ್ಯ	850
d) ಹಣಕಾಸು ಲೆಕ್ಕ ಪತ್ರದಲ್ಲಿ ಒದಗಿಸಲಾದ ಆದಾಯ ತೆರಿಗೆ	20,000
e) ಹಣಕಾಸು ಪುಸ್ತಕದಲ್ಲಿ ನಮೂದಿಸಿರುವ ಸವಕಳಿ	5,000
f) ವೆಚ್ಚ ನಿರ್ಣಯ ಪುಸ್ತಕದಲ್ಲಿ ನಮೂದು ಆಗದ ಬಡ್ಡಿ ಸ್ವೀಕರಣೆ	4,000
g) ಹಣಕಾಸು ಪುಸ್ತಕದಲ್ಲಿ ಒದಗಿಸಲಾದ ಕಳ್ಳತನ ಮತ್ತು ಕಿರುಗಳ್ಳತನದ ನಷ್ಟ	1,000
h) ವೆಚ್ಚ ನಿರ್ಣಯ ಪುಸ್ತಕದಲ್ಲಿ ನಮೂದಿಸಿರುವ ಸವಕಳಿ	6,500
i) ಕಛೇರಿ ಮೇಲುವೆಚ್ಚಗಳು ಹೆಚ್ಚಾಗಿ ವಸೂಲಾಗಿದೆ	900

ವಿಭಾಗ – ಡಿ

12. ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ. **(1×8=8)**

A) ಈ ಕೆಳಕಂಡ ಉದ್ಯಮಕ್ಕೆ ವೆಚ್ಚದ ಘಟಕವನ್ನು ಗುರುತಿಸಿ.

a) ಕಬ್ಬಿಣ

b) ವಿದ್ಯುಚ್ಛಕ್ತಿ

c) ಇಟ್ಟಿಗೆಗಳು

d) ಕಾಗದ

e) ಮರದ ದಿಮ್ಮಿ

f) ಸಿಮೆಂಟ್

g) ಸಾರಿಗೆ

h) ಪೆಟ್ರೋಲ್

ಅಥವಾ

B) ದಾಸ್ತಾನು ಸಂಗ್ರಹಣೆ ಪ್ರಕ್ರಿಯೆಯ ಹಂತಗಳನ್ನು ಉಲ್ಲೇಖಿಸಿ.